**ಶ್ರೀ ಮಹದೇವರ ಸ್ತುತಿ**

ಚಂದ್ರಶೇಖರ ಸುಮನಸೇಂದ್ರಪೂಜಿತಚರಣಾಹೀಂದ್ರ ಪದಯೋಗ್ಯ ವೈರಾಗ್ಯ |
ವೈರಾಗ್ಯಪಾಲಿಸಮ- ರೇಂದ್ರ ನಿನ್ನಡಿಗೆ ಶರಣೆಂಬೆ || 1 ||
ನಂದಿವಾಹನ ವಿಮಲಮಂದಾಕಿನೀಧರನೆ ವೃಂದಾರಕೇಂದ್ರ ಗುಣಸಾಂದ್ರ |
ಗುಣಸಾಂದ್ರ ಎನ್ನ ಮನಮಂದಿರದಿ ನೆಲೆಸಿ ಸುಖವೀಯೋ || 2 ||
ಕೃತ್ತಿವಾಸನೆ ನಿನ್ನ ಭೃತ್ಯಾನುಭೃತ್ಯ ಎನ್ನುತ್ತ ನೋಡಯ್ಯ ಶುಭಕಾಯ |
ಶುಭಕಾಯ ಭಕ್ತರಪ ಮೃತ್ಯು ಪರಿಹರಿಸಿ ಸಲಹಯ್ಯ || 3 ||
ನೀಲಕಂಧರ ರುಂಡಮಾಲಿ ಮೃಗವರಪಾಣಿ ಶೈಲಜಾರಮಣ ಶಿವರೂಪಿ |
ಶಿವರೂಪಿ ಎನ್ನವರ ಪಾಲಿಸೋ ನಿತ್ಯ ಪರಮಾಪ್ತ || 4 ||
ತ್ರಿಪುರಾರಿ ನಿತ್ಯ ಎನ್ನಪರಾಧಗಳ ನೋಡಿ ಕುಪಿತನಾಗದಲೆ ಸಲಹಯ್ಯ |
ಸಲಹಯ್ಯ ಬಿನ್ನೈಪೆ ಕೃಪಣವತ್ಸಲ ಕೃಪೆಯಿಂದ || 5 ||
ಪಂಚಾಸ್ಯ ಮನ್ಮನದ ಚಂಚಲವ ಪರಿಹರಿಸಿ ಸಂಚಿತಾಗಾಮಿಪ್ರಾರಬ್ಧ |
ಪ್ರಾರಬ್ಧದಾಟಿಸು ವಿ- ರಿಂಚಿಸಂಭವನೆ ಕೃತಯೋಗ || 6 ||
ಮಾನುಷಾನ್ನವನುಂಡು ಜ್ಞಾನಶೂನ್ಯನು ಆದೆ ಏನುಗತಿ ಎನಗೆ ಅನುದಿನ |
ಅನುದಿನದಿ ನಾ ನಿನ್ನಧೀನದವನಯ್ಯ ಪ್ರಮಥೇಶ || 7 ||
ಅಷ್ಟಮೂರ್ತ್ಯಾತ್ಮಕನೆ ವೃಷ್ಣಿವರ್ಯನ ಹೃದಯಧಿಷ್ಠಾನದಲ್ಲಿ ಇರದೋರೋ |
ಇರದೋರು ನೀ ದಯಾ- ದೃಷ್ಟಿಯಲಿ ನೋಡೋ ಮಹದೇವ || 8 ||
ಮೃಡದೇವ ಎನ್ನ ಕೈಪಿಡಿಯೊ ನಿನ್ನವನೆಂದು ಬಡವ ನಿನ್ನಡಿಗೆ ಬಿನ್ನೈಪೆ |
ಬಿನ್ನೈಪೆನೆನ್ನ ಮನ- ದೃಢವಾಗಿ ಇರಲಿ ಹರಿಯಲ್ಲಿ || 9 ||
ಉಗ್ರತಪ ನಾ ನಿನ್ನನುಗ್ರಹದಿ ಜನಿಸಿದೆ ಪರಿಗ್ರಹಿಸಿ ಎನ್ನ ಸಂತೈಸು |
ಸಂತೈಸು ಇಂದ್ರಿಯವ ನಿಗ್ರಹಿಪಶಕ್ತಿ ಕರುಣಿಸೋ || 10 ||
ಭಾಗೀರಥೀಧರನೆ ಭಾಗವತಜನರ ಹೃದ್ರೋಗ ಪರಿಹರಿಸಿ ನಿನ್ನಲ್ಲಿ |
ನಿನ್ನಲ್ಲಿ ಭಕ್ತಿ ಚೆನ್ನಾಗಿ ಕೊಡು ಎನಗೆ ಮರೆಯದೆ || 11 ||
ವ್ಯೋಮಕೇಶನೆ ತ್ರಿಗುಣನಾಮ ದೇವೋತ್ತಮ ಉಮಾಮನೋಹರನೆ ವಿರುಪಾಕ್ಷ |
ವಿರುಪಾಕ್ಷ ಮಮ ಗುರು ಸ್ವಾಮಿ ನೀ ಎನಗೆ ದಯವಾಗೊ || 12 ||
ಲೋಚನತ್ರಯ ನಿನ್ನ ಯಾಚಿಸುವೆ ಸಂತತವು ಖೇಚರೇಶನ ವಹನ ಗುಣರೂಪ |
ಗುಣರೂಪ ಕ್ರಿಯೆಗಳಾಲೋಚನೆಯ ಕೊಟ್ಟು ಸಲಹಯ್ಯ || 13 ||
ಮಾತಂಗಷಣ್ಮುಖರ ತಾತ ಸಂತತ ಜಗನ್ನಾಥವಿಠ್ಠಲನ ಮಹಿಮೆಯ |
ಮಹಿಮೆಯನು ತಿಳಿಸು ಸಂಪ್ರೀತಿಂದಲೆಮಗೆ ಅಮರೇಶ || 14 ||
ಭೂತನಾಥನ ಗುಣ ಪ್ರಭಾತಕಾಲದಲೆದ್ದು ಪ್ರೀತಿಪೂರ್ವಕದಿ ಪಠಿಸುವ |
ಪಠಿಸುವರ ಶ್ರೀಜಗನ್ನಾಥವಿಠ್ಠಲನು ಸಲಹುವ || 15 ||